# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**: 09/2022

ಡಬ್ಲ್ಯೂ ಡಬ್ಲ್ಯೂ-2

**<u>ದಿನಾಂಕ 09.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ ಎ.ಸಿ.ಎನ್. ವಕೀಲರಿಂದಃ**

ರಿಟ್ರೆಂಚ್ ಆದವರಲ್ಲಿ ನಾನೂ ಸಹ ಒಬ್ಬ ಎಂದರೆ ಸರಿ. ರಿಟ್ರೆಂಚ್ ಆದವರದೂ ಹಾಗೂ ನನ್ನದೂ ಸೇರಿ ಔದ್ಯಮಿಕ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿರುತ್ತದೆ ಎಂದರೆ ಸರಿ. ಸದರಿ 42 ಜನ ತಮ್ಮನ್ನು ಕೆಲಸದಿಂದ ತೆಗೆದು ಹಾಕಿರುತ್ತಾರೆ ಎಂದು ಹೇಳಿ ಈ ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿ.

ದಿನಾಂಕ 10.11.2020 ರಂದು ನಡೆದ ಒಂದು ರಾಜಿ ಸಂಧಾನಕ್ಕೆ ನಾನು ಜಂಟೀ ಕಾರ್ಯದರ್ಶಿ ಆಗಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಅದರಲ್ಲಿ ರಾಮು ಕೆ.ಎಸ್. ಎನ್ನುವವರು ಒಬ್ಬರು ಮಾತ್ರ ರಾಜಿ ಮಾಡಿಕೊಂಡು ಹೋಗಿರುತ್ತಾರೆ ಎಂದರೆ ಆ ವಿಚಾರ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 42 ಜನರ ಪ್ರಕರಣದಲ್ಲಿ ಅವರು ಇಲ್ಲ ಎಂದು ಹೇಳುತ್ತಾರೆ. ಅವರು ರಾಜೀ ಸಂಧಾನಕ್ಕೆ ಸಂಘದ ಪದಾಧಿಕಾರಿಯಾಗಿ ಸಹಿ ಮಾಡಿರುತ್ತಾರೆ. ಉಳಿದ 4 ಜನರು ಈಗಲೂ ಕೆಲಸ ಮಾಡುತ್ತಿದ್ದಾರೆ ಎಂದರೆ ಹೌದು.

ನಾನು ಸಹಿ ಮಾಡಿದ್ದ ರಾಜೀ ಒಪ್ಪಂದದ ದಾಖಲೆ ನಿ.ಎಂ.1 ಆಗಿರುತ್ತದೆ ಎಂದರೆ ಹೌದು. ಅದು ಕಾರ್ಮಿಕ ಇಲಾಖೆಯಲ್ಲಿ ಮಾಡಿದ್ದ ರಾಜೀ ಒಪ್ಪಂದ ಎಂದರೆ ಹೌದು. ಸದರಿ ನಿ.ಎಂ.1 ರ ದಾಖಲೆಯಲ್ಲಿ ಲೇ-ಆಫ್ ನ್ನು ನಾವುಗಳು ಹಿಂಪಡೆದುಕೊಂಡಿರುತ್ತೇವೆ ಎಂದು ನಮೂದಿಸ ಲಾಗಿರುತ್ತದೆ ಎಂದರೆ ಸರಿ. ಅದರಂತೆ 75 ಜನ ಕೆಲಸಗಾರರು ತಮ್ಮ ಕೆಲಸಕ್ಕೆ ಸೇರಿಕೊಂಡಿದ್ದರು ಎಂದರೆ ಸರಿ. ಅದಾದ ನಂತರವೂ ಕೂಡ ನಮ್ಮ ಸಂಘದವರು ದಿನಾಂಕ 20.01.2021 ರಂದು

ಅಂದರೆ ನಿ.ಎಂ.2 ರಂತೆ ಅರ್ಜಿ ನೀಡಿ ಕಡತವನ್ನು ಕಳುಹಿಸಬೇಡಿ ಎಂದು ಕೋರಿರುತ್ತಾರೆ ಎಂದರೆ ಸರಿ.

ಕೊವೀಡ್ ಸಮಯದಲ್ಲಿ ಯಾರನ್ನಾದರೂ ಕೆಲಸದಿಂದ ತೆಗೆದರೆ ಅಂತಹವರಿಗೆ ಒಂದು ವರ್ಷದವರೆಗೆ ಸಂಬಳವನ್ನು ಕೊಡಬೇಕು ಎಂದು ಸರ್ಕಾರದ ನಡಾವಳಿ ಇರುತ್ತದೆ ಎಂದರೆ ಹೌದು. ಅದರಂತೆ ಸಂಬಳವನ್ನು ತೆಗೆದುಕೊಂಡಿರುತ್ತಾರೆ ಎಂದರೆ ಹೌದು. ಇದೇ ಕಾರಣದಿಂದ ಪ್ರಕರಣವನ್ನು ಮುಕ್ತಾಯಗೊಳಿಸದೇ ಇತ್ಯರ್ಥದಲ್ಲಿಡಲಾಗಿತ್ತು ಎಂದರೆ ಸರಿಯಲ್ಲ.

ನಾನು ಈ ಪ್ರಕರಣದಲ್ಲಿ ಅರ್ಜಿದಾರರು ಸಲ್ಲಿಸಿರುವ ಅರ್ಜಿಯ ವಿಚಾರಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ಅರ್ಜಿದಾರರು ತಾವು ಸಲ್ಲಿಸಿರುವ ಅರ್ಜಿಯಲ್ಲಿ ಆಡಳಿತ ವರ್ಗದವರು ಕಾನೂನು ಬಾಹಿರವಾಗಿ ನಡೆದುಕೊಂಡು ಬರುತ್ತಿದ್ದಾರೆ ಎಂದು ಹೇಳಿರುವುದರ ಬಗ್ಗೆ ನನಗೇನೂ ಮಾಹಿತಿ ಇಲ್ಲ. ಕಾನೂನಿಗೆ ಒಳಪಡದೇ ಉತ್ಪಾದನೆಯನ್ನು ಆಡಳಿತ ವರ್ಗದವರು ಕೈಗೊಳ್ಳುತ್ತಿದ್ದಾರೆ ಎಂದು ಅರ್ಜಿದಾರರು ತಿಳಿಸಿರುವ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಎರಡನೇ ಪಕ್ಷಗಾರರಿಗೆ ಒಂದೇ ಯೂನಿಟ್ ಇರುತ್ತದೆ. ಅವರಿಗೆ ಯಾವುದೇ ಶಾಖೆಗಳು ಇರುವುದಿಲ್ಲ ಎಂದರೆ ಸರಿ. ಸಂಸ್ಥೆಯು ಲಾಭದಾಯಕವಾಗಿ ನಡೆಯುತ್ತಿರುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ಲೇ-ಆಫ್ ಮಾಡಿರುವುದು ಸರಿ ಇಲ್ಲ ಎಂದು ನಾವು ಸರ್ಕಾರಕ್ಕೆ ಅರ್ಜಿ ನೀಡಿರುತ್ತೇವೆ ಎಂದರೆ ಸರಿ. ಈ ಸಂಬಂಧ ನಾವು ಆಡಳಿತ ವರ್ಗಕ್ಕೆ ಅರ್ಜಿಯನ್ನು ನೀಡಿಲ್ಲ ಎಂದರೆ ಸಾಕ್ಷಿ, ಅವರು ನಾವು ನೀಡಿದ್ದ ಅರ್ಜಿಯನ್ನು ತೆಗೆದು ಕೊಂಡಿರಲಿಲ್ಲ ಆದ್ದರಿಂದ ಅಂಚೆ ಮೂಲಕ ಕಳುಹಿಸಿರುತ್ತಾರೆ ಎಂದು ಮಹದೇವಪ್ಪ ನನಗೆ ಹೇಳಿರುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ಅಂಚೆ ರಶೀದಿ ಅಥವಾ ಸ್ವೀಕೃತಿ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೀರಾ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ.

ರಿಟ್ರೆಂಚ್ ಮಾಡುವುದಕ್ಕೆ ಮುನ್ನ ಕೆಲಸಗಾರರ ಜೇಷ್ಠತಾ ಪಟ್ಟಿಯನ್ನು ಸರ್ಕಾರಕ್ಕೆ ಹಾಗೂ ಸಂಘಕ್ಕೆ ಆಡಳಿತ ವರ್ಗದವರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಜೇಷ್ಠತಾ ಪಟ್ಟಿ ಸರಿ ಇಲ್ಲ ಎಂದು ಹೇಳಿಕೊಂಡು ಆಡಳಿತ ವರ್ಗಕ್ಕೆ ಅರ್ಜಿ ನೀಡಿದ್ದೀರಾ ಅಥವಾ ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ಪ್ರಶ್ನೆ ಮಾಡಿದ್ದೇವೆ ಎನ್ನುತ್ತಾರೆ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಮೌಖಿಕವಾಗಿ ನಾವು ಪ್ರಶ್ನೆ ಮಾಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಜೇಷ್ಠತಾ ಪಟ್ಟಿಯನ್ನು ನಾವು ಎಲ್ಲಿಯೂ ಯಾರ ಮುಂದೆಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ.

ದಿನಾಂಕ 24.03.2020 ರಂದು ಸರ್ಕಾರ ಕೊವೀಡ್ ಹಿನ್ನೆಲೆಯಲ್ಲಿ ಲಾಕ್ ಡೌನ್ ಮಾಡಿತ್ತು ಎಂದರೆ ಹೌದು. ಅದೇ ರೀತಿ ದಿನಾಂಕ 20.04.2021 ರಂದು 2 ನೇ ಬಾರಿ ಲಾಕ್ ಡೌನ್ ಮಾಡಿದ್ದರು ಎಂದರೆ ಹೌದು. ನನಗೆ ಈ ಸಂಸ್ಥೆ ಉತ್ಪಾದಿಸಿದ ವಸ್ತುಗಳನ್ನು ರಫ್ತು ಮಾಡುವ ಅಧಿಕಾರವನ್ನು ಮಾತ್ರ ನೀಡಿದ್ದರು, ದೇಶದ ಒಳಗೆ ಮಾರಾಟ ಮಾಡುವ ಅಧಿಕಾರವನ್ನು ಆಡಳಿತ ವರ್ಗ ಕೊಟ್ಟಿಲ್ಲ ಎಂದರೆ ಸರಿ. ನಾವು ಉತ್ಪಾದನೆ ಮಾಡಿದ್ದ ವಸ್ತುಗಳಿಗೆ Brand Name ಇರಲಿಲ್ಲ ಎಂದರೆ ಹೌದು. ಬೇರೆ ಬೇರೆ ದೇಶಗಳಿಂದ ಏನೂ ಆದೇಶಗಳು ಬರುತ್ತಿದ್ದವೋ ಆ ಪ್ರಕಾರ ಉತ್ಪಾದನೆಯನ್ನು ಮಾಡಿ, ತಯಾರಿಸಿದ ವಸ್ತುಗಳನ್ನು ಅವರಿಗೆ ಮಾರಾಟ ಮಾಡುತ್ತಿದ್ದೆವು ಎಂದರೆ ಸರಿ. ಸಾಕ್ಷಿ ಮುಂದುವರೆದು ಯಾವ ಗುಣಮಟ್ಟ ಬೇಕು ಅದರ ಆಧಾರದಲ್ಲಿ ನಾವು ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದೆವು ಎಂದು ಹೇಳುತ್ತಾರೆ.

ಕೊವೀಡ್ ಸಮಯದಲ್ಲಿ ಬೇರೆ ಕಡೆಯಿಂದ ಆದೇಶಗಳು ಬರಲಿಲ್ಲ ಹಾಗೂ ಕೊಟ್ಟ ಆದೇಶಗಳು ರದ್ದಾಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಕೊವೀಡ್ ಸಮಯದಲ್ಲಿ ಆಡಳಿತಾತ್ಮಕ ಖರ್ಚುಗಳನ್ನು ಸರಿದೂಗಿಸಲು ಸ್ಥಳೀಯವಾಗಿ ಕಚ್ಚಾ ವಸ್ತುಗಳನ್ನು ತರಿಸಿ ಜಾಬ್ ಆದೇಶಗಳನ್ನು ಪಡೆದು, ಅದರಂತೆ ತಯಾರು ಮಾಡಿ ಮಾರಾಟ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿ

ಮುಂದುವರೆದು ಹೊರಗಿನ ಆದೇಶ ಹಾಗೂ ಜಾಬ್ ಆದೇಶ ಎರಡನ್ನೂ ಸಹ ತೆಗೆದುಕೊಳ್ಳು ತ್ತಿದ್ದರು ಎಂದು ಹೇಳುತ್ತಾರೆ.

ನಮ್ಮ ವಕೀಲರು ನೀಡಿದ ಸಾಕ್ಷಿ ಪಟ್ಟಿಯಲ್ಲಿ ನಮೂದು ಮಾಡಿರುವ ಸಾಕ್ಷಿಗಳ ಪೈಕಿ ನನ್ನನ್ನು ಸೇರಿ ಇನ್ನೂ 5 ಜನರು ರಿಟ್ರೆಂಚ್ ಆದವರು ಎಂದರೆ ಸಾಕ್ಷಿ 1 ನೇ ಸಾಕ್ಷಿ ಕೆಲಸದಲ್ಲಿ ಇರುತ್ತಾರೆ, 2 ರಿಂದ 6 ರವರು ರಿಟ್ರೆಂಚ್ ಆದವರು ಎಂದು ಹೇಳುತ್ತಾರೆ. ನಮ್ಮ ಬೇಡಿಕೆ ಹಾಗೂ ಆರೋಪಣೆಗಳು ಎಲ್ಲರದ್ದೂ ಒಂದೇ ರೀತಿ ಇರುತ್ತದೆ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಶ್ರೀ ಎ.ಸಿ.ಎನ್.ರವರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**